**III ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ**

**SC.42/2023**

ದಿಃ 29.06.2026.

(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

**Cw-3 Pw-2**

| | | |
|---|---|---|
| ಹೆಸರು | ಃ | ಆನಂದನಾಯ್ಕ |
| ತಂದೆಯ ಹೆಸರು | ಃ | ಉಮೇಶನಾಯ್ಕ |
| ವಯಸ್ಸು | ಃ | 33 ವರ್ಷ |
| ಉದ್ಯೋಗ | ಃ | ಚಾಲಕ |
| ವಾಸಸ್ಥಳ | ಃ | ಅಮ್ಮನಪುರ ಗ್ರಾಮ, ರಾಮನಗರ ತಾಲ್ಲೂಕು. |

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

1. ಆರೋಪಿ ಬೋರಯ್ಯ ಮತ್ತು ಆತನ ಪತ್ನಿ ಭದ್ರಮ್ಮ ನನಗೆ ಗೊತ್ತು. ಬೋರಯ್ಯ ಮತ್ತು ಆತನ ಪತ್ನಿ ಭದ್ರಮ್ಮರವರು ಊರಿನಿಂದ ಹೊರಗಡೆ ಇರುವ ಜಮೀನಿನಲ್ಲಿ ಟಾರ್ಪಲ್ ಶೆಡ್ ಹಾಕಿಕೊಂಡು ವಾಸವಾಗಿದ್ದರು. ಆರೋಪಿ ಬೋರಯ್ಯ ಭದ್ರಮ್ಮನನ್ನು ವಿವಾಹ ಆಗಿದ್ದನೋ ಇಲ್ಲವೋ ನನಗೆ ತಿಳಿದಿಲ್ಲ. ಬೋರಯ್ಯನ ಮೊದಲನೇ ಪತ್ನಿಯ ಬಗ್ಗೆ ನನಗೆ ತಿಳಿದಿರುವುದಿಲ್ಲ. ಆರೋಪಿ ಬೋರಯ್ಯ ಆತನ ಪತ್ನಿ ಭದ್ರಮ್ಮನ ಜೊತೆ ಗಲಾಟೆ ಮಾಡುತ್ತಿದ್ದು, ಆತನ ಪತ್ನಿ ಭದ್ರಮ್ಮನ ಜೊತೆ ಗಲಾಟೆ ಮಾಡುವುದು ಬೇಡ ಎಂದು ಬುದ್ದಿವಾದ ಹೇಳುತ್ತಿದ್ದೆ. ಸುಮಾರು 5 ವರ್ಷದ ಹಿಂದೆ ಬೋರಯ್ಯನ ಪತ್ನಿ ಭದ್ರಮ್ಮ ಮೃತಪಟ್ಟಿರುತ್ತಾರೆ ಎಂದು ಊರಿನವರು ತಿಳಿಸಿದರು ನಾನು ಮೃತ ಭದ್ರಮ್ಮನವರ ಶವವನ್ನು ನೋಡಿರುವುದಿಲ್ಲ. ನಾನು ಪೋಲೀಸರ ಮುಂದೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ವಾಟೀ ಸವಾಲು ಮಾಡಲು ಅಭಿಯೋಜಕರು ಕೋರಿದ್ದಾರೆ. ಅದರಂತೆ ಸಾಕ್ಷಿಯನ್ನು ಪ್ರತಿಕೂಲ ಎಂದು ಪರಿಗಣಿಸಿ ವಾಟೀ ಸವಾಲು ಮಾಡಲು ಅಭಿಯೋಜಕರಿಗೆ ಅನುಮತಿ ನೀಡಲಾಗಿದೆ)**

**<u>ವಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ</u>**

2. ದಿಃ 23.11.2022 ರಂದು ಪ್ರಕರಣಕ್ಕೆ ಸಂಬಂಧಿಸಿದಂತೆ ಪೋಲೀಸರು ನನ್ನನ್ನು ವಿಚಾರಣೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಪೋಲೀಸರಲ್ಲಿ ನೀಡಿರುವ ಹೇಳಿಕೆಯಲ್ಲಿ ಬೋರಯ್ಯ ಆತನ ಮೊದಲನೆ ಪತ್ನಿಯನ್ನು ಕೊಲೆ ಮಾಡಿ ಆ ಕೇಸಿನಲ್ಲಿ ಜೈಲಿಗೆ ಹೋಗಿ ವಾಪಸ್ ಬಂದ ನಂತರ ನಮ್ಮ ಊರಿಗೆ ಬಂದು ನಮ್ಮ ತೋಟ ಕಾಯುತ್ತಿದ್ದ ಎಂದು ನಾನು ಪೊಲೀಸರಿಗೆ ತಿಳಿಸಿದ್ದೇನೆ ಎಂದರೆ ಸರಿಯಲ್ಲ. ಶೆಡ್ ನಲ್ಲಿ ಬೋರಯ್ಯ ಮದ್ಯಪಾನ ಮಾಡಿ ಆತನ ಪತ್ನಿಗೆ ಹೊಡೆಯುತ್ತಿದ್ದ ಎಂದು ನಾನು ಪೊಲೀಸರಿಗೆ ನೀಡಿರುವ ಹೇಳಿಕೆಯಲ್ಲಿ ತಿಳಿಸಿರುತ್ತೇನೆ ಎಂದರೆ ಸರಿಯಲ್ಲ. ಮೊದಲನೆಯ ಹೆಂಡತಿಯನ್ನು ಕೊಲೆ ಮಾಡಿದಂತೆ ಭದ್ರಮ್ಮನನ್ನು ಸಹ ಕೊಲೆ ಮಾಡುವುದಾಗಿ ಆರೋಪಿ ಹೇಳುತ್ತಿದ್ದ ಬಗ್ಗೆ ಭದ್ರಮ್ಮ ನನಗೆ ತಿಳಿಸಿರುತ್ತಾಳೆ ಎಂದರೆ ಸರಿಯಲ್ಲ. ದಿಃ 22.11.2022 ರಂದು ಆರೋಪಿ ಬೋರಯ್ಯ ಆತನ ಪತ್ನಿ ಭದ್ರಮ್ಮನನ್ನು ತೋಟದಲ್ಲಿ ಕೊಲೆ ಮಾಡಿರುವ ವಿಚಾರ ತಿಳಿದು ನಾನು ಸ್ಥಳಕ್ಕೆ ಹೋಗಿ ಭದ್ರಮ್ಮನವರ ಮೃತ ದೇಹವನ್ನು ನೋಡಿದ್ದು, ಆಕೆಯ ಮುಖ, ಕತ್ತು, ಹಣೆಯ ಮೇಲೆ ಗಾಯಗಳು ಕಂಡು ಬಂದವು ಎಂದರೆ

ಸರಿಯಲ್ಲ. ನಾನು ಪೋಲೀಸರಲ್ಲಿ ಈಗ ನನಗೆ ಓದಿ ಹೇಳಲಾದಂತೆ " ಬೋರಯ್ಯ ಮೊದಲನೇ ಹೆಂಡತಿಯನ್ನು ……….… “ ನುಡಿದಿರುತ್ತೇನೆ ಎಂದು ನಿಪಿ 3 ರಂತೆ ಹೇಳಿಕೆ ನೀಡಿರುತ್ತೇನೆ ಎಂದರ ಸರಿಯಲ್ಲ. ಆರೋಪಿತನಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ**

ಪಾಟೀ ಸವಾಲು ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಎಸ್.ಎ. ಹಿದಾಯತ್ ಉಲ್ಲಾ ಷರೀಫ್)
III ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ರಾಮನಗರ.